**ಓ.ಎಸ್.08/2022**
**ಪಿ.ಡಬ್ಲ್ಯು 01**

ದಿನಾಂಕ: 02-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 6 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಪಿ ಕೆ ಡಿ ರವರಿಂದಃ-**

ನಾನು ಹತ್ತನೇ ತರಗತಿ ಓದಿದ್ದೇನೆ. ನಾನು ಈಗ ಗಂಗಾವತಿಯಲ್ಲಿ ವಾಸವಿದ್ದೇನೆ. ನಾನು ಗಂಗಾವತಿಯಲ್ಲಿಯೇ ಹುಟ್ಟಿ ಬೆಳೆದಿದ್ದೇನೆ.ನಾನು 4 ಜಮೀನು ಮತ್ತು ಪ್ಲಾಟ ಬಗ್ಗೆ ಕೇಸ ಮಾಡಿದ್ದೇನೆ. ಜಮೀನುಗಳ ಸರ್ವೆ ನಂ 166, 269, 14 ಮತ್ತು 17/1. ನನ್ನ ತಂದೆ ಮೃತ ಪಟ್ಟು 20 ವರ್ಷದ ಮೇಲೆ ಅಗಿದೆ . ಅವರು ಮೆದಿಕನಾಳದಲ್ಲಿ ಮೃತ ಪಟ್ಟಿದ್ದಾರೆ. ಈ ಕೇಸಗೆ ಮಾಹಿತಿಯನ್ನು ವಕೀಲರಿಗೆ ನಾನು ಮತ್ತು ಶಾರದಾ ಕೊಟ್ಟಿದ್ದೇವೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ನಮ್ಮ ತಂದೆಯವರ ಮದುವೆ ಯಾವಾಗ ಎಲ್ಲಿ ಆಯಿತು ನನಗೆ ಗೊತ್ತಿಲ್ಲಾ. ನನ್ನ ತಂದೆ ಮತ್ತು ಅವರ ಇಬ್ಬರು ಹೆಂಡತಿಯರ ಮದುವೆಗೆ ಸಂಬಂದಪಟ್ಟ ದಾಖಲೆ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲಾ. ನನ್ನ ತಂದೆ ಗೆ ಇಬ್ಬರು ಹೆಂಡತಿಯರು ಅಂತಾ ನಾನು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ. ನನ್ನ ತಂದೆಯವರು ಮೊದಲ ಮದುವೆ ಯಾವಾಗ ಎಲ್ಲಿ ಆದರು ಅಂತಾ ನಾನು ವಕೀಲರಿಗೆ ಹೇಳಿದ್ದೇನೆ. ಆ ವಿಷಯ ನನ್ನ ವಾದ ಪತ್ರದಲ್ಲಿ ಬರೆದಿದೆ. 1999 ರಲ್ಲಿ ಸರ್ವೆ ನಂ 17/1 ನನ್ನ ತಂದೆಯಿಂದ ಬಸಪ್ಪನವರಿಗೆ ವರ್ಗಾವಣೆ ಆಗಿದೆ ಎಂದರೆ ಸರಿ. ವರ್ಗಾವಣೆ ತಪ್ಪು ಇದೆ ಅಂತಾ ನಾನು ಎಲ್ಲಿಯೂ ಅರ್ಜಿ ಸಲ್ಲಿಸಿಲ್ಲ. 2010 ರಲ್ಲಿ ಸವಿತಾರವರಿಗೆ ಬಸಪ್ಪನವರು ಸರ್ವೆ ನಂ 17/1 ನ್ನು ಮಾರಟ ಮಾಡಿದ್ದಾರೆ ಎಂದರೆ ಸರಿ. ಆ ಖರೀದಿ ಪತ್ರದ ಅಧಾರದಲ್ಲಿ ಸವಿತಾ ರವರ ಹೆಸರಿಗೆ ಸದರಿ ಆಸ್ತಿ ವರ್ಗಾವಣೆ ಆಗಿದೆ ಎಂದರೆ ಸರಿ. ಸವಿತಾ ಅವರ ಹೆಸರಿಗೆ ಅಸ್ತಿ ವರ್ಗಾವಣೆ ಆಗಿದ್ದು ತಪ್ಪು ಇದೆ ಅಂತಾ ನಾನು ಎಲ್ಲಿಯೂ ತಕರಾರು ಸಲ್ಲಿಸಿಲ್ಲ. ದಾವಾ ಆಸ್ತಿಯ ಚಕಬಂದಿ ನನಗೆ ಹೇಳಲು ಬರುತ್ತದೆ. ಸರ್ವೆ ನಂ 269 ರ ಚಕಬಂದಿ ನನಗೆ ಗೊತ್ತಿಲ್ಲಾ. ನನಗೆ ದಾವಾ ಆಸ್ತಿಗಳ ಚಕಬಂದಿ ಹೇಳಲು ಬರುವುದಿಲ್ಲಾ. ಸರ್ವೆ ನಂ 17/1 ರ ಮೇಲೆ ಸವಿತಾರವರು ಕೆನರಾ ಬ್ಯಾಂಕನಲ್ಲಿ ಸಾಲ ಮಾಡಿದ್ದರು ಎಂದರೆ ಗೊತ್ತಿಲ್ಲಾ. ಸರ್ವೆ ನಂ 14 ಬಸಪ್ಪನ ಹೆಸರಿನಲ್ಲಿದೆ. ಸರ್ವೆ ನಂ 14 ಬಸಪ್ಪನ ಹೆಸರಿನಲ್ಲಿ ಇಲ್ಲಾ ವಿಜಯಲಕ್ಷ್ಮೀಯವರ ಹೆಸರಿನಲ್ಲಿದೆ ಎಂದರ ಸರಿಯಲ್ಲ. ಸರ್ವೆ ನಂ 17/1 ಸವಿತಾ ಅವರ ಕಡೆಯಿಂದ ಲಕ್ಷ್ಮೀರಾಯಲು ಖರೀದಿ ಮಾಡಿದ್ದಾರೆ ಎಂದರೆ ಸರಿ. ಈಗಲೂ ಸಹ ಲಕ್ಷ್ಮೀರಾಯಲು ಸರ್ವೆ ನಂ 17/1 ರ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನನಗೆ ಲಕ್ಷ್ಮೀರಾಯಲುರವರ ವಿರುದ್ದ ದಾವೆ ಹಾಕಲು ಯಾವುದೇಕಾರಣ ಇಲ್ಲಾ,ನಾನು ಅವರ ವಿರುದ್ದ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ 1, 4 ಪರ ವಕೀಲರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲಾ ಅಲ್ಲದೇ ಪಾಟಿ ಸವಾಲು ಮಾಡಲು ಕರೆಯಿಸಿದರು ಬಂದಿರುವುದಿಲ್ಲಾ ಅದ್ದರಿಂದ ಅವರ ಪರ ಪಾಟಿ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

Sd/-
**(ಉಂಡಿ ಮಂಜುಳಾ ಶಿವಪ್ಪ )**
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.